**ಎಸ್ ನಂ. 28/2022**
**ಪಿ ಡಬ್ಲ್ಯೂ 02**

**ದಿಃ 20-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಯ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 4 ಮತ್ತು 5 ರ ಪರ ಶ್ರೀ ಎಸ್ ಐ ಕೆ ವಕೀಲರಿಂದ**

ದಾವಾ ಆಸ್ತಿ ನಮ್ಮ ತಂದೆಯಿಂದ ನಮಗೆ ಬಂದಿರುತ್ತದೆ. ನಮ್ಮ ತಂದೆಗೆ ಅವರ ತಂದೆಯಿಂದ ಬಂದಿರುತ್ತದೆ. ಮೂಲ ಆಸ್ತಿ ದಾನದ ಮೂಲಕ ನಮ್ಮ ಅಜ್ಜನ ಪೂರ್ವಜರಿಗೆ ಬಂದಿದ್ದು ಅವರಿಂದ ನಮ್ಮ ಅಜ್ಜನಿಗೆ ನಂತರ ನಮ್ಮ ತಂದೆಗೆ ಬಂದಿರುತ್ತದೆ. ರಮಾಬಾಯಿ ದೇಸಾಯಿ ಇವರ ಕುಟುಂಬದಿಂದ ದಾನದ ಮೂಲಕ ನಮ್ಮ ಕುಟುಂಬಕ್ಕೆ ಬಂದಿರುತ್ತದೆ. ದಾವಾ ಆಸ್ತಿಯನ್ನು ರಮಾಬಾಯಿ ಮತ್ತು ಕೃಷ್ಣಾಜಿ ದೇಸಾಯಿ ಇವರಿಗೆ ದೇವಸ್ಥಾನದ ದೀಪ ಹಚ್ಚುವ ಸಲುವಾಗಿ ಸದರಿ ಆಸ್ತಿಯನ್ನು ನೀಡಲಾಗಿತ್ತು ಅಂದರೆ ಸರಿಯಲ್ಲ. ನಾವು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ. ರಮಾಬಾಯಿ ಮತ್ತು ಕೃಷ್ಣಾಜಿ ದೇಸಾಯಿ ಇವರಿಗೆ ಆಸ್ತಿಯನ್ನು ಕೇವಲ ಉಂಡುಬಿಡುವ ಸಲುವಾಗಿ ಮಾತ್ರ ನೀಡಲಾಗಿತ್ತು ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂ 4 ಮತ್ತು 5 ರವರಿಗೂ ಸಹ ಪಾಲು ಇರುತ್ತದೆ ಅಂದರೆ ಸರಿಯಲ್ಲ. ನಾವು

ಖೊಟ್ಟಿ ದಾಖಲೆಯನ್ನು ಸೃಷ್ಟಿಸಿ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.